UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
24-07-2026
Friday

ನಾಳೆ ರೈತ ಸಂತೆಗೆ ಚಾಲನೆ

ಬೆಂಗಳೂರು: ಕೃಷಿ ಇಲಾಖೆ ವತಿಯಿಂದ ಜು. 25ರಂದು ಜಿ.ಕೆ.ವಿಕೆ ಆವರಣದ ಗಣಪತಿ ದೇವಸ್ಥಾನದ ಹತ್ತಿರದಲ್ಲಿ ಬೆಳಗ್ಗೆ 7ರಿಂದ 4ರವರೆಗೆ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಉತ್ಪನ್ನಗಳ ರೈತ ಸಂತೆಯನ್ನು ಆಯೋಜಿಸಲಾಗುವುದು.

ಸಂತೆಯಲ್ಲಿ ಆಕರ್ಷಕ ಕೇಕ್ ಪ್ರದರ್ಶನ, ಸಿರಿಧಾನ್ಯಗಳ ದೋಸೆ, ಇಡ್ಲಿ ಹಿಟ್ಟುಗಳು, ತಾಜಾ ಮಾವು, ಹಲಸು, ಡ್ರಾಗನ್ ಹಣ್ಣು, ಗುಲಾಬಿ ಬಣ್ಣದ ಸೇಬಿ, ಬಿತ್ತನೆ ಬೀಜಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ತೋಟಗಾರಿಕೆ ಉಪಕರಣಗಳು ಹಾಗೂ ಇತರೆ ತಾಜಾ ಹಣ್ಣು, ತರಕಾರಿಗಳು, ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥಗಳು, ತಾಜಾ ಅಣಬೆ ಇತ್ಯಾದಿಗಳನ್ನು ಪ್ರದರ್ಶಿಸಲಾಗುವುದು ಎಂದು ಕೃಷಿ ವಿವಿ ಹಿರಿಯ ವಾರ್ತಾತಜ್ಞ, ಮುಖ್ಯಸ್ಥ ಕೆ.ಪಿ. ರಘುಪ್ರಸಾದ್ ತಿಳಿಸಿದರು.

Samyuktha Karnataka Pg.04

ಜಿಕೆವಿಕೆಯಲ್ಲಿ ರೈತ ಸಂತೆ ನಾಳೆ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಜುಲೈ 25ರಂದು ಬೆಳಿಗ್ಗೆ 7 ರಿಂದ ಸಂಜೆ 4 ರವರೆಗೆ ವಿಶೇಷ ರೈತ ಸಂತೆ ಆಯೋಜಿಸಲಾಗಿದೆ. ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಸಮೀಪ ನಡೆಯಲಿರುವ ಈ ಸಂತೆಯಲ್ಲಿ ರೈತರು ನೇರವಾಗಿ ಬೆಳೆದ ತಾಜಾ ಕೃಷಿ ಉತ್ಪನ್ನ, ಹಣ್ಣು-ತರಕಾರಿ, ಸಿರಿಧಾನ್ಯ ಆಧಾರಿತ ಆಹಾರ ಪದಾರ್ಥ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲಿದ್ದಾರೆ. ಈ ಬಾರಿಯ ರೈತ ಸಂತೆಯ ಪ್ರಮುಖ ಆಕರ್ಷಣೆಗಳಾಗಿ ವಿಶೇಷ ಕೇಕ್ ಪ್ರದರ್ಶನ, ಸಿರಿಧಾನ್ಯ ದೋಸೆ ಮತ್ತು ಇಡ್ಲಿ, ರೈತರು ಬೆಳೆದ ತಾಜಾ ಮಾವು, ಹಲಸು, ಡ್ರಾ್ಯಗನ್ ಹಣ್ಣು, ಗುಲಾಬಿ ಸೇಬು, ವಿವಿಧ ಬಿತ್ತನೆ ಬೀಜ, ಅಣಬೆ ಇರಲಿವೆ. ಜತೆಗೆ ಸುಗಂಧ ಮತ್ತು ಔಷಧೀಯ ಸಸ್ಯ, ಸಾವಯವ ಉತ್ಪನ್ನ, ಅಲಂಕಾರಿಕ ಗಿಡ, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣ, ಎರೆಹುಳು ಗೊಬ್ಬರ ಸಂಬಂಧಿಸಿದ ಮಾಹಿತಿ, ಕೃಷಿ ಪ್ರಕಟಣೆ ಹಾಗೂ ವಿಶ್ವವಿದ್ಯಾಲಯದ ವಿವಿಧ ತಂತ್ರಜ್ಞಾನಗಳ ಕುರಿತು ಮಾಹಿತಿ ಮಳಿಗೆಗಳನ್ನೂ ಏರ್ಪಡಿಸಲಾಗಿದೆ.

Vishwavani Pg.04

ಗಾಂಧಿ ಕೃಷಿವಿಜ್ಞಾನ ಕೇಂದ್ರದಲ್ಲಿ ರೈತ ಸಂತೆ ನಾಳೆ

ಬೆಂಗಳೂರು: ಬೆಂಗಳೂರು ಕೃಷಿ ವಿವಿಯ ಜಿಕೆವಿಕೆಯಲ್ಲಿ ಶನಿವಾರ (ಜು.25) ರೈತ ಸಂತೆ ನಿಗದಿಯಾಗಿದೆ. ಗಣಪತಿ ದೇವಸ್ಥಾನದ ಬಳಿ ಬೆಳಗ್ಗೆ 7ರಿಂದ ಸಂಜೆ 3ರವರೆಗೆ ಸಂತೆ ನಡೆಯಲಿದೆ. ಈ ಬಾರಿ ಸಿರಿಧಾನ್ಯಗಳ ದೋಸೆ, ಇಡ್ಲಿ ಹಿಟ್ಟು, ರೈತರು ಬೆಳೆದ ತಾಜಾ ಮಾವು, ಹಲಸು, ಗುಲಾಬಿ ಸೀಬೆ, ಇತರ ಹಣ್ಣು-ತರಕಾರಿಗಳು ಮಾರಾಟಕ್ಕೆ ಅವಕಾಶ ಇರಲಿದೆ. ಇದರ ಜತೆಗೆ ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆಯ ಜೈವಿಕ ಕೀಟನಾಶಕ, ಕರಕುಶಲ ವಸ್ತುಗಳು, ಜೇನು ಉತ್ಪನ್ನ, ಸುಗಂಧ ಮತ್ತು ಔಷಧೀಯ ಸಸ್ಯಗಳು, ಇತರ ಕೃಷಿ ಸಂಬಂಧಿತ ಉತ್ಪನ್ನಗಳನ್ನು ಖರೀದಿಸಲು ಅವಕಾಶ ಇರಲಿದೆ.

- ಬೆಳಗ್ಗೆ 7ರಿಂದ ಮಧ್ಯಾಹ್ನ 3ರವರೆಗೆ ಆಯೋಜನೆ

Vijayavani Pg.3C

ನಾಳೆ ರೈತ ಸಂತೆಗೆ ಚಾಲನೆ

ಬೆಂಗಳೂರು: ಕೃಷಿ ಇಲಾಖೆ ವತಿಯಿಂದ ಜು. 25ರಂದು ಜಿ.ಕೆ.ವಿಕೆ ಆವರಣದ ಗಣಪತಿ ದೇವಸ್ಥಾನದ ಹತ್ತಿರದಲ್ಲಿ ಬೆಳಗ್ಗೆ 7ರಿಂದ 4ರವರೆಗೆ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಉತ್ಪನ್ನಗಳ ರೈತ ಸಂತೆಯನ್ನು ಆಯೋಜಿಸಲಾಗುವುದು.

ಸಂತೆಯಲ್ಲಿ ಆಕರ್ಷಕ ಕೇಕ್ ಪ್ರದರ್ಶನ, ಸಿರಿಧಾನ್ಯಗಳ ದೋಸೆ, ಇಡ್ಲಿ ಹಿಟ್ಟುಗಳು, ತಾಜಾ ಮಾವು, ಹಲಸು, ಡ್ರಾಗನ್ ಹಣ್ಣು, ಗುಲಾಬಿ ಬಣ್ಣದ ಸೇಬಿ, ಬಿತ್ತನೆ ಬೀಜಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ತೋಟಗಾರಿಕೆ ಉಪಕರಣಗಳು ಹಾಗೂ ಇತರೆ ತಾಜಾ ಹಣ್ಣು, ತರಕಾರಿಗಳು, ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥಗಳು, ತಾಜಾ ಅಣಬೆ ಇತ್ಯಾದಿಗಳನ್ನು ಪ್ರದರ್ಶಿಸಲಾಗುವುದು ಎಂದು ಕೃಷಿ ವಿವಿ ಹಿರಿಯ ವಾರ್ತಾತಜ್ಞ, ಮುಖ್ಯಸ್ಥ ಕೆ.ಪಿ. ರಘುಪ್ರಸಾದ್ ತಿಳಿಸಿದರು.

Samyuktha Karnataka Pg.04

ತೆಂಗಿನ ಚಿಪ್ಪಿಗೆ ವಿದೇಶಗಳಲ್ಲೂ ಬೇಡಿಕೆ: 1 ಜೊತೆಗೆ 3.50 ರೂ.

ಔಷಧ, ಸೌಂದರ್ಯವರ್ಧಕ ತಯಾರಿಕೆಯಲ್ಲಿ ಬಳಕೆ

- ಅಶೋಕ್ ಆರ್.ಪಿ.

ಸಂ.ಕ.ಸಮಾಚಾರ, ತುಮಕೂರು

ಕಸದ ತೊಟ್ಟಿಗೆ ಸೇರುತ್ತಿದ್ದ ಹಾಗೂ ಒಲೆಯ ಉರುವಲಾಗಿ ಬಳಕೆಯಾಗುತ್ತಿದ್ದ ತೆಂಗಿನಕಾಯಿ ಚಿಪ್ಪಿಗೆ ಈಗ ಅಂತಾರಾಷ್ಟ್ರೀಯ ಮತ್ತು ದೇಶೀಯ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆ ಬಂದಿದೆ. ಹಿಂದೆ ಉಚಿತವಾಗಿ ಅಥವಾ ಅತ್ಯಲ್ಪ ಬೆಲೆಗೆ ಸಿಗುತ್ತಿದ್ದ ತೆಂಗಿನ ಚಿಪ್ಪುಗಳು, ಇಂದು ರೈತರು ಮತ್ತು ವ್ಯಾಪಾರಿಗಳಿಗೆ ಭಾರೀ ಆದಾಯದ ಮೂಲವಾಗಿ ಬದಲಾಗಿವೆ. ಪುಟ 6



ರೋಗಬಾಧೆಯಿಂದ ಈ ಬಾರಿ ಉತ್ಪಾದನೆ ಕುಸಿತ

ಕಳೆದ ಕೆಲವು ವರ್ಷಗಳಿಂದ ತೀವ್ರ ಬಿಸಿಲು, ಮಳೆಯ ಕೊರತೆ, ರೋಗಬಾಧೆ ಹಿನ್ನೆಲೆಯಲ್ಲಿ ತೆಂಗು ಇಳುವರಿ ಕುಸಿದಿದೆ. ಚಿಪ್ಪುಕೊಳ್ಳುವ ಗುಜರಿ ವ್ಯಾಪಾರಿಗಳು ಮಧ್ಯವರ್ತಿಗಳು ಕರಾವಳಿ, ಮಲೆನಾಡು ಹಾಗೂ ಇತರೆ ತೆಂಗು ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ರೈತರ ಮನೆ ಬಾಗಿಲಿಗೆ ಬಂದು, ಅಂಗಡಿಗಳಿಗೆ ತೆರಳಿ ಖರೀದಿಸುತ್ತಿದ್ದಾರೆ.

ತೆಂಗಿನ ಚಿಪ್ಪಿಗೆ ವಿದೇಶದಲ್ಲೂ ಬೇಡಿಕೆ: 1 ಚಿಪ್ಪಿಗೆ 3.50 ರೂ.

ಮೊದಲ ಪುಟದಿಂದ...

ಮಾರುಕಟ್ಟೆಯಲ್ಲಿ ಒಂದು ಕೆಜಿ ತೆಂಗಿನ ಚಿಪ್ಪಿಗೆ 20 ರೂ.ನಿಂದ 22 ರೂ.ವರೆಗೆ ಬೆಲೆ ದೊರೆಯುತ್ತಿದೆ. ಉತ್ತಮ ಗುಣಮಟ್ಟದ ಪ್ರತಿ ಒಣ ಚಿಪ್ಪು 3ರೂ.ನಿಂದ 4.50 ರೂ.ವರೆಗೂ ಮಾರಾಟವಾಗುತ್ತಿವೆ.

ಇತ್ತೀಚಿನ ದಿನಗಳಲ್ಲಿ ರೈತರು ಬಲಿತ ತೆಂಗಿನಕಾಯಿಗಿಂತಲೂ ಎಳನೀರು ಮಾರಾಟಕ್ಕೆ ಒಲವು ತೋರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಒಣ ತೆಂಗಿನ ಕಾಯಿ ಚಿಪ್ಪಿನ ಲಭ್ಯತೆ ಕಡಿಮೆಯಾಗಿದೆ. ಪೂರೈಕೆ ಕಡಿಮೆಯಾಗಿರುವುದರಿಂದ ಸಹಜವಾಗಿ ಬೆಲೆ ಹೆಚ್ಚಳವಾಗಿದೆ. ಈ ಬೆಳವಣಿಗೆಗಳಿಂದ ಚಿಪ್ಪು ತ್ಯಾಜ್ಯವಲ್ಲ, ಬದಲಾಗಿ ಹಣ ನೀಡುವ ಕಪ್ಪು ಚಿನ್ನವಾಗಿ ಬದಲಾಗಿದೆ!

ಯೂರೋಪ್, ಚೀನಾ ದೇಶಗಳಿಗೆ ರಫ್ತಾಗುತ್ತೆ

ತೆಂಗಿನ ಚಿಪ್ಪನ್ನು ಸುಟ್ಟು ತಯಾರಿಸುವ ಇದ್ದಿಲು ಮತ್ತು ಇದರಿಂದ ತಯಾರಾಗುವ ಆ್ಯಕ್ಟಿವೇಟೆಡ್ ಕಾರ್ಬನ್‌ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಪಾರ ಬೇಡಿಕೆಯಿದೆ. ಇದನ್ನು ಜಲಶುದ್ಧೀಕರಣ ಘಟಕಗಳು, ವಾಯು ಶುದ್ಧೀಕರಣ, ಔಷಧಿ ತಯಾರಿಕೆ, ಸೌಂದರ್ಯವರ್ಧಕಗಳು ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಬಳಸಲಾಗುತ್ತದೆ. ವಿದೇಶಿ ಮಾರುಕಟ್ಟೆಯಲ್ಲಿ ಉತ್ತಮ ಮೌಲ್ಯವಿರುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲೂ ಏರಿಳಿತದ ಬೆಚ್ಚಾಗಿದೆ. ವಿಶೇಷವಾಗಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯಗಳಿಂದ ತೆಂಗಿನ ಚಿಪ್ಪಿನ ಉತ್ಪನ್ನಗಳು ಯುರೋಪ್, ಮಧ್ಯಪ್ರಾಚ್ಯ ದೇಶಗಳು, ಚೀನಾ, ಅಮೆರಿಕ ಹಾಗೂ ಏಷ್ಯಾದ ಇತರೆ ದೇಶಗಳಿಗೆ ರಫ್ತಾಗುತ್ತಿವೆ.

Samyuktha Karnataka Pg.01 & 06

ಕೈಕೊಟ್ಟ ಮುಂಗಾರು ಮಳೆ: ಕೃಷಿಗೆ ಹಿನ್ನಡೆ



• ಬಂಗಾರಪೇಟೆ: ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಕೃಷಿ ಚಟುವಟಿಕೆಗಳು ಅನುಭವಿಸಿದೆ. ತೀವ್ರ ಈಗಾಗಲೇ ಏಪ್ರಿಲ್ ಬಿತ್ತನೆ ಮಾಡಿರುವ ರಾಗಿ ಮೊಳಕೆ ಒಡೆಯದೇ ಒಣಗುತ್ತಿದ್ದರೆ, ನೆಲಗಡಲೆ ಬೆಳೆ ಒಣಗಲಾರಂಭಿಸಿದೆ. ಮುಂದಿನ ಕೆಲ ದಿನಗಳಲ್ಲಿಯೂ ಸಮರ್ಪಕ ಮಳೆಯಾಗದಿದ್ದರೆ ಬೆಳೆ ಸಂಪೂರ್ಣ ನಾಶವಾಗುವ ಸಾಧ್ಯತೆ ಎದುರಾಗಿದೆ. ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

ಈ ವರ್ಷ ಉತ್ತಮ ಮಳೆ ನಿರೀಕ್ಷೆಯಲ್ಲಿದ್ದ ರೈತರಿಗೆ ಸಮರ್ಪಕ ಮಳೆ ಇಲ್ಲದೆ ಸಂಕಷ್ಟಕ್ಕೆ ತಂದೊಡ್ಡಿದೆ, ಬಂಗಾರಪೇಟೆ ತಾಲೂಕಿನಲ್ಲಿ 15,970 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆ ಮಾಡುವ ಗುರಿಯನ್ನು ಕೃಷಿ ಇಲಾಖೆ ಹೊಂದಿತ್ತು. ಆದರೆ ಮಳೆ ಕೊರತೆಯಿಂದ ಇದುವರೆಗೆ ಕೇವಲ 39 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ರಾಗಿ ಬಿತ್ತನೆ ಸಾಧ್ಯವಾಗಿದೆ, ಮಳೆ ಕೈಕೊಟ್ಟ ಕಾರಣ ಬಹುತೇಕ ರೈತರು ಬಿತ್ತನೆ ಕಾರ್ಯವನ್ನೇ ಮುಂದೂಡಿದ್ದು, ಹೊಲಗಳು ಖಾಲಿಯಾಗಿವೆ, ಇತ್ತ ಬಿತ್ತನೆ ಮಾಡಿದ್ದ ರಾಗಿ ಭೂಮಿಯಲ್ಲಿ, ತೇವಾಂಶ ಕಡಿಮೆಯಾಗಿ ಬೀಜ ನಾಶವಾಗುವ ಭೀತಿ ಎದುರಾಗಿದೆ. ಕೃಷಿ ಇಲಾಖೆ 1,205 ಹೆಕ್ಟೇರ್ ಪ್ರದೇಶದಲ್ಲಿ ನೆಲಗಡಲೆ ಬಿತ್ತನೆ ಮಾಡುವ ಗುರಿ ಹೊಂದಲಾಗಿದ್ದರೂ, ಇದುವರೆಗೆ ಕೇವಲ 550 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ನಡೆದಿದೆ. ಈಗ ಮಳೆ ನಿರೀಕ್ಷೆಯಲ್ಲಿದ್ದುದರಿಂದ ಸಾಲ ಸೋಲ ಮಾಡಿ ಬಿತ್ತನೆ ಮಾಡಿದ ನೆಲಗಡಲೆ ಮೊಳಕೆಯೊಡೆದ ಬೆಳೆ ಒಣಗಲಾರಂಭಿಸಿದ್ದು, ರೈತರು ಮಳೆಯನ್ನೇ ಎದುರು ನೋಡುತ್ತಿದ್ದಾರೆ. ಇನ್ನು ಅವರೆ ಬೆಳೆಗೆ 953 ಹೆಕ್ಟೇರ್ ಹಾಗೂ ಅಲಸಂದೆ ಬೆಳೆಗೆ 35 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ನಿಗದಿಪಡಿಸಲಾಗಿದ್ದರೂ, ಇದುವರೆಗೆ ಒಂದೇ ಒಂದು ಹೆಕ್ಟೇರ್‌ನಲ್ಲೂ ಬಿತ್ತನೆ ನಡೆದಿಲ್ಲ, ಅದೇ ರೀತಿ ತೊಗರಿ ಬೆಳೆಗೆ 976 ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿದೆ. ಇದುವರೆಗೆ ಕೇವಲ 90 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ನಡೆದಿದೆ, ಉಳಿದ ಪ್ರದೇಶಗಳಲ್ಲಿ ಮಳೆಯ ನಿರೀಕ್ಷೆಯಲ್ಲಿ ರೈತರು ಕಾಯುತ್ತಿದ್ದಾರೆ. ಮಳೆ ಇನ್ನೂ ಕೆಲವು ದಿನಗಳಲ್ಲಿ ಮಳೆ ಸುರಿಯದಿದ್ದರೆ ನೆಲಗಡಲೆ ಸೇರಿದಂತೆ ಅರಂಭಿಕ ಹಂತದ ಬೆಳೆಗಳು ಹಾನಿ ಗೊಳಗಾಗುವ ಸಾಧ್ಯತೆ ಇದೆ, ಇದರಿಂದ ರೈತರು ಮರುಬಿತ್ತನೆ ಮಾಡ ಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗಲಿದ್ದು, ಬೀಜ, ಗೊಬ್ಬರ ಹಾಗೂ ಕೂಲಿ ಹೆಚ್ಚಳ ಹೆಚ್ಚಾಗಿ ಆರ್ಥಿಕ ಹೊರೆ ಮತ್ತಷ್ಟು ಹೆಚ್ಚಾಗಲಿದೆ.

ಕೃಷಿ ಇಲಾಖೆಯ ಅಂಕಿ ಅಂಶಗಳ ಪ್ರಕಾರ, ಪ್ರಮುಖ ಮುಂಗಾರು ಬೆಳೆಗಳ ಬಿತ್ತನೆ ಪ್ರಗತಿ ಅತ್ಯಂತ ನಿರಾಶಾದಾಯಕವಾಗಿದ್ದು, ಸಮರ್ಪಕ ಮಳೆಯಾದರೆ ಮಾತ್ರ ಉಳಿದ ಪ್ರದೇಶಗಳಲ್ಲಿ ಬಿತ್ತನೆ ಚುರುಕುಗೊಳ್ಳುವ ಸಾಧ್ಯತೆ ಇದೆ. ಇಲ್ಲವಾದರೆ ಈ ಹಂಗಾಮಿನ ಕೃಷಿ ಉತ್ಪಾದನೆ ಮೇಲೆ ಗಂಭೀರ ಪರಿಣಾಮ ಬೀರುವ ಆತಂಕ ವ್ಯಕ್ತವಾಗಿದೆ, ಜತೆಗೆ ರೈತರಿಗೆ ಲಕ್ಷಾಂತರ ರೂ. ಗಳ ನಷ್ಟ ಉಂಟಾಗಲಿದೆ.

Hosadiganta Pg.07

ನಾಳೆ ಜಿಕೆವಿಕೆಯಲ್ಲಿ ರೈತ ಸಂತೆ: ಕೃಷಿ ಯಂತ್ರೋಪಕರಣ ಮಾರಾಟ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ವಿವಿಧ ಮಹಿಳಾ ಸ್ವ-ಸಹಾಯ ಸಂಘಗಳ ಸಹಯೋಗದಲ್ಲಿ ಜುಲೈ 25 (ಶನಿವಾರ)ರಂದು ಜಿಕೆವಿಕೆ ಆವರಣದ ಗಣಪತಿ ದೇಗುಲದ ಬಳಿ ವಿವಿಧ ಉತ್ಪನ್ನಗಳ ರೈತ ಸಂತೆ ಆಯೋಜಿಸಲಾಗುತ್ತಿದೆ. ಬೆಳಿಗ್ಗೆ 7 ರಿಂದ ಸಂಜೆ 4ರ ತನಕ ಉತ್ಪನ್ನಗಳ ಮಾರಾಟ, ಪ್ರದರ್ಶನ ನಡೆಯಲಿದೆ. ಈ ಬಾರಿ ರೈತ ಸಂತೆಯಲ್ಲಿ ವಿಶೇಷವಾಗಿ ಸಿರಿಧಾನ್ಯಗಳ ದೋಸೆ ಮತ್ತು ಇಡ್ಲಿ ಹಿಟ್ಟು, ನಾವಯವ ತಾಜಾ ಮಾವು, ಹಲಸು, ಬಿತ್ತನೆ ಬೀಜಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ತೋಟಗಾರಿಕೆ ಉಪಕರಣಗಳು ಸೇರಿದಂತೆ ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥಗಳು ಇರಲಿದೆ. ಇದರೊಂದಿಗೆ ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು ಪ್ರದರ್ಶನ ಮತ್ತು ಮಾರಾಟ ಇರಲಿದೆ ಎಂದು ಜಿಕೆವಿಕೆ ತಿಳಿಸಿದೆ.

Udayavani Pg.02

ಅನುಗ್ರಹ ಕೃಷಿ ಅನುದಾನ ತ್ವರಿತ ಬಿಡುಗಡೆಗೊಳಿಸಿ



• ಬೆಂಗಳೂರು: ಕೃಷಿ ಜತೆಗೆ ಪಶುಸಂಗೋಪನೆಯನ್ನು ಕಸುಬಾಗಿಸಿಕೊಂಡಿರುವ ರೈತರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಅನುಗ್ರಹ ಯೋಜನೆಯಲ್ಲಿ ಬಾಕಿ ಇರುವ 97.57ರೂ. ಕೋಟಿ ಅನುದಾನವನ್ನು ತ್ವರಿತವಾಗಿ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯನ್ನೂ ಹೊಂದಿರುವ ಮುಖ್ಯಮಂತ್ರಿಗಳಿಗೆ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, ರಾಜ್ಯದಲ್ಲಿ ಹೈನುಗಾರಿಕೆ, ಕುರಿ ಹಾಗೂ ಮೇಕೆ ಸಾಕಾಣಿಕೆಯನ್ನು ಅವಲಂಬಿಸಿರುವ ಲಕ್ಷಾಂತರ ರೈತರು ಮತ್ತು ಕುರಿಗಾಹಿಗಳ ಜೀವನೋಪಾಯವನ್ನು ಬಲವರ್ಧನೆಯ ಉದ್ದೇಶದಿಂದ 2013-18ರ ಅವಧಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ನಮ್ಮ ಸರ್ಕಾರವು ಅನುಗ್ರಹ ಯೋಜನೆಯನ್ನು ಜಾರಿಗೆ ತಂದಿತ್ತು ಎಂದು ಪತ್ರದಲ್ಲಿ ಡಿಸಿಎಂ ಹೇಳಿದ್ದಾರೆ.

ಅವರ ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ರೈತರಿಗೆ ಆಸರೆಯಾಗಿದ್ದ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಅನುದಾನದ ಕೊರತೆಯಿಂದಾಗಿ ಕೈಬಿಟ್ಟಿದ್ದನ್ನು. 2023ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ರೈತರ ಹಿತದೃಷ್ಟಿಯಿಂದ ಈ ಯೋಜನೆಯನ್ನು ಮತ್ತೊಮ್ಮೆ ಜಾರಿಗೊಳಿಸಲಾಯಿತು.

2023ರಿಂದ ಇಲ್ಲಿಯವರೆಗೆ ಈ ಯೋಜನೆಗಾಗಿ 134 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಇನ್ನೂ 97.57 ಕೋಟಿ ರೂ.ಅನುದಾನ ಬಿಡುಗಡೆ ಆಗಬೇಕಿದೆ ಎಂದು ಪತ್ರದಲ್ಲಿ ಡಿಸಿಎಂ ನೆನಪಿಸಿದ್ದಾರೆ. ಹೀಗಾಗಿ ರೈತರು ರಾಜ್ಯ ಸರ್ಕಾರದಿಂದ ಪರಿಹಾರದ ನಿರೀಕ್ಷೆಯಲ್ಲಿದ್ದು, ಶೀಘ್ರ ಅನುದಾನವನ್ನು ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಕೋರಿದ್ದಾರೆ.

Hosadiganta Pg.06

ನಾಳೆ ರೈತ ಸಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಗಣಪತಿ ದೇವಸ್ಥಾನ ಬಳಿ ಜುಲೈ 25ರಂದು ಬೆಳಿಗ್ಗೆ 7ರಿಂದ ಸಂಜೆ 4ರವರೆಗೆ ರೈತ ಸಂತೆ ಆಯೋಜಿಸಲಾಗಿದೆ.

ಮಾವು, ಹಲಸು, ಸೇಬು ಸೇರಿದಂತೆ ಹಣ್ಣುಗಳು, ತರಕಾರಿಗಳು, ಸಿರಿಧಾನ್ಯ ಪದಾರ್ಥಗಳು, ಬಿತ್ತನೆ ಬೀಜ, ರೇಷ್ಮೆ ಕೃಷಿ ಉಪ – ಉತ್ಪನ್ನಗಳು, ತೋಟಗಾರಿಕೆ ಉಪಕರಣ ಲಭ್ಯ ಇವೆ. ಸುಗಂಧ ಮತ್ತು ಔಷಧೀಯ ಸಸ್ಯ, ಸಾವಯವ ಉತ್ಪನ್ನ, ಆಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು ಮಾರಾಟವಾಗಲಿದ್ದು, ಗ್ರಾಹಕರು ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕೃಷಿ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

Prajavani Pg.03

ತಂಬಾಕು ಬೆಳೆಗಾರರಿಗೆ ಆರ್ಥಿಕ ನೆರವು ಹೆಚ್ಚಳ



ಮೈಸೂರು: ಪ್ರಾಕೃತಿಕ ವಿಕೋಪಗಳಿಂದ ಹಾನಿಗೊಳಗಾದ ಎಫ್‌ಸಿವಿ ತಂಬಾಕು ಬೆಳೆಗಾರರಿಗೆ ಮಹತ್ವದ ಪರಿಹಾರವಾಗಿ, ಕೇಂದ್ರ ಸರಕಾರವು ತಂಬಾಕು ಮಂಡಳಿಯ ಮೂಲಕ ನೀಡಲಾಗುವ ಅನುದಾನ ಮತ್ತು ಬಡ್ಡಿರಹಿತ ಸಾಲದ ಮೊತ್ತವನ್ನು ಹೆಚ್ಚಿಸಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಪ್ರಾಕೃತಿಕ ವಿಕೋಪಗಳಿಂದ ತಂಬಾಕು ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟವನ್ನು ಮನಗಂಡು, ಅವರಿಗೆ ನೀಡಲಾಗುತ್ತಿರುವ ಆರ್ಥಿಕ ನೆರವನ್ನು ಹೆಚ್ಚಿಸುವಂತೆ ಕೋರಿದ್ದೆ. ಈ ಪರಿಣಾಮ, ತಂಬಾಕು ಮಂಡಳಿಯು ಅನುದಾನ ಹಾಗೂ ಬಡ್ಡಿರಹಿತ ಸಾಲದ ಮೊತ್ತವನ್ನು 50ಸಾವಿರದಿಂದ 75 ಸಾವಿರ ರು.ಗೆ ಹೆಚ್ಚಿಸುವುದರೊಂದಿಗೆ, ಇತರ ನೆರವಿನ ವಿಭಾಗಗಳಲ್ಲೂ ಪರಿಷ್ಕೃತ ಮಾರ್ಗಸೂಚಿಗಳಂತೆ ಆರ್ಥಿಕ ನೆರವು ಹೆಚ್ಚಿಸಿದೆ. ಕರ್ನಾಟಕದ ತಂಬಾಕು ಬೆಳೆಗಾರರಿಗೂ ನ್ಯಾಯ ಸಮ್ಮತ ಬೆಂಬಲ ಬೆಲೆ ದೊರಕುವಂತೆ ಕೇಂದ್ರ ಸರಕಾರ ಕ್ರಮ ಕೈಗೊಳ್ಳಬೇಕು. ಆಂಧ್ರಪ್ರದೇಶದ ತಂಬಾಕು ಬೆಳೆಗಾರರಂತೆಯೇ ಇಲ್ಲಿ ವರನ್ನೂ ಪರಿಗಣಿಸಬೇಕು. ಕರ್ನಾಟಕದ ರೈತರೂ ಸಮಾನ ರಕ್ಷಣೆಗೆ ಅರ್ಹರು ಎಂಬುದನ್ನು ಮರೆಯಬಾರದು ಎಂದು ಕೋರಿದ್ದಾರೆ.

ಈ ಪರಿಷ್ಕೃತ ನೆರವು ಪ್ರಾಕೃತಿಕ ವಿಕೋಪದಿಂದ ಸಂಕಷ್ಟಕ್ಕೆ ಒಳಗಾದ ತಂಬಾಕು ಬೆಳೆಗಾರರಿಗೆ ಸಕಾಲದಲ್ಲಿ ಆರ್ಥಿಕ ಬಲ ನೀಡುವ ಜತೆಗೆ, ಅವರ ಜೀವನೋಪಾಯ ಪುನರುಜ್ಜೀವನಗೊಳಿಸಲು ನೆರವಾಗಲಿದೆ.

– ಯದುವೀರ ಒಡೆಯರ್, ಸಂಸದ

Samyutha Karnataka Pg.04

ಆ.6ರಿಂದ 17ರ ವರೆಗೆ ಲಾಲ್‌ಬಾಗ್‌ನಲ್ಲಿ 220ನೇ ಫಲಪುಷ್ಪ ಪ್ರದರ್ಶನ

ಹೂವಿನ ಲೋಕದಲ್ಲಿ ಅರಳಲಿದೆ ಗಂಗರ ಇತಿಹಾಸ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸ್ವಾತಂತ್ರ್ಯೋತ್ಸವದ ಅಂಗವಾಗಿ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ನಡೆಯಲಿರುವ 220ನೇ ಫಲಪುಷ್ಪ ಪ್ರದರ್ಶನ ಈ ಬಾರಿ ಕರ್ನಾಟಕದ ಸುದೀರ್ಘ ಆಡಳಿತ ನಡೆಸಿದ ಗಂಗರ ರಾಜವಂಶದ ವೈಭವವನ್ನು ಅನಾವರಣಗೊಳಿಸುವ ವಿಶಿಷ್ಟ ಐತಿಹಾಸಿಕ ಉತ್ಸವವಾಗಿ ರೂಪುಗೊಳ್ಳುತ್ತಿದೆ. ಆಗಸ್ಟ್ 6ರಿಂದ 17ರವರೆಗೆ 12 ದಿನಗಳ ಕಾಲ ನಡೆಯುವ ಈ ಪ್ರದರ್ಶನದಲ್ಲಿ ಸುಮಾರು 2.45 ಕೋಟಿ ರು. ವೆಚ್ಚದಲ್ಲಿ ಗಂಗರ ಕಾಲದ ಇತಿಹಾಸ, ಸಂಸ್ಕೃತಿ, ವಾಸ್ತುಶಿಲ್ಪ, ಧಾರ್ಮಿಕ ಪರಂಪರೆ ಮತ್ತು ನೀರಾವರಿ ವ್ಯವಸ್ಥೆ ಹೂವುಗಳ ಮೂಲಕ ಜೀವಂತವಾಗಿ ಕಟ್ಟಿಕೊಡಲಾಗುತ್ತಿದೆ.

ಕ್ರಿ.ಶ. 324ರಿಂದ 999ರವರೆಗೆ ಸುಮಾರು 675 ವರ್ಷಗಳ ಕಾಲ ದಕ್ಷಿಣ ಕರ್ನಾಟಕದಲ್ಲಿ ಆಡಳಿತ ನಡೆಸಿದ ಪಶ್ಚಿಮ ಗಂಗರು ಕನ್ನಡದ ಹೆಮ್ಮೆಯ ರಾಜವಂಶಗಳಲ್ಲಿ ಪ್ರಮುಖರು. ಕನ್ನಡ ಭಾಷೆ, ಸಾಹಿತ್ಯ, ಶಿಕ್ಷಣ, ಕೃಷಿ, ನೀರಾವರಿ ಹಾಗೂ ಶಿಲ್ಪಕಲೆಗೆ ಅವರು ನೀಡಿದ ಅಪೂರ್ವ ಕೊಡುಗೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಈ ಬಾರಿಯ ಫಲಪುಷ್ಪ ಪ್ರದರ್ಶನದ ಮುಖ್ಯ ಪರಿಕಲ್ಪನೆಯನ್ನು ಗಂಗರ ವೈಭವದ ಮೇಲೆ ರೂಪಿಸಲಾಗಿದೆ.

ಪ್ರಮುಖ ಆಕರ್ಷಣೆಗಳು: ಪ್ರದರ್ಶನದಲ್ಲಿ ಸುಮಾರು 1,360 ವರ್ಷಗಳಷ್ಟು ಹಳೆಯದಾದ ತಲಕಾಡಿನ ನಾಗನಾಥೇಶ್ವರ ದೇವಾಲಯದ ಪುಷ್ಪ ಮಾದರಿ, ಶ್ರವಣಬೆಳಗೊಳದ ಜೈನ ಬಸದಿ, ವಿಶ್ವವಿಖ್ಯಾತ ಗೋಮ್ಮಟೇಶ್ವರ (ಬಹುಬಲಿ) ಪ್ರತಿಮೆ, ಚಿಕ್ಕಬಳ್ಳಾಪುರದ ಭೋಗ ನಂದೀಶ್ವರ ದೇವಾಲಯ, ಗಂಗರು ನಿರ್ಮಿಸಿದ ಕೋಲಾರದ ಕೆರೆ-ಕಟ್ಟೆಗಳು, ರಾಷ್ಟ್ರಕೂಟ ರೊಂದಿಗೆ ನಡೆದ ಯುದ್ಧದ ದೃಶ್ಯಾವಳಿಗಳು ಸೇರಿದಂತೆ ಅನೇಕ ಐತಿಹಾಸಿಕ ಕಲಾಕೃತಿಗಳು ಲಕ್ಷಾಂತರ ವಿವಿಧ ತಳಿಯ ಹೂವುಗಳಿಂದ ನಿರ್ಮಾಣಗೊಳ್ಳಲಿವೆ. ಗಾಜಿನ ಮನೆಯಲ್ಲಿ ಗಂಗರ ಕಾಲದ ವಾಸ್ತುಶಿಲ್ಪದ ವಿಶೇಷ ಮಾದರಿಗಳು, ಶಿಲಾಶಾಸನಗಳು, ವೀರಗಲ್ಲುಗಳ ಪ್ರತಿಕೃತಿಗಳು ಹಾಗೂ ಗಂಗರ ಕಾಲದ ಕಲಾ ವೈಭವವನ್ನು ಬಿಂಬಿಸುವ ವಿಶಿಷ್ಟ ಪ್ರದರ್ಶನಗಳನ್ನು ಸಿದ್ಧಪಡಿಸಲಾಗುತ್ತಿದೆ. ಗಂಗರ ರಾಜವಂಶದ ಸಂಸ್ಥಾಪಕ ಕೊಂಗಣಿವರ್ಮ (ದಡಿಗ), ಶ್ರೀಪುರುಷ, ರಾಚಮಲ್ಲ, ಮಾರಸಿಂಹ ಸೇರಿದಂತೆ ಪ್ರಮುಖ ಅರಸರ ಪುಷ್ಪ ಕಲಾಕೃತಿಗಳೂ ಪ್ರದರ್ಶನದ ವಿಶೇಷ ಆಕರ್ಷಣೆಯಾಗಲಿವೆ.

ನೀರಾವರಿ, ಶಿಕ್ಷಣ ಮತ್ತು ಸಂಸ್ಕೃತಿಯ ಅನಾವರಣ: ಗಂಗರು ಕೇವಲ ಯುದ್ಧ ವಿಜಯಗಳಿಗೆ ಮಾತ್ರವಲ್ಲದೆ ನೀರಾವರಿ ಅಭಿವೃದ್ಧಿ, ಕೆರೆ ನಿರ್ಮಾಣ, ಕೃಷಿ ಉತ್ತೇಜನ ಮತ್ತು ಶಿಕ್ಷಣ ಕ್ಷೇತ್ರಕ್ಕೂ ನೀಡಿದ ಕೊಡುಗೆಗಳನ್ನು ಪ್ರದರ್ಶನದಲ್ಲಿ ವಿಶೇಷವಾಗಿ ಪರಿಚಯಿಸಲಾಗುತ್ತಿದೆ. ತಲಕಾಡು, ಮಾನ್ಯಪುರ (ಮಣ್ಣೆ), ಕೋಲಾರ ಹಾಗೂ ಶ್ರವಣಬೆಳಗೊಳವನ್ನು ಗಂಗರ ಕಾಲದ ಪ್ರಮುಖ ಶಿಕ್ಷಣ ಕೇಂದ್ರಗಳಾಗಿ ಬಿಂಬಿಸಲಾಗಿದ್ದು, ಜೈನ ಧರ್ಮ, ಕನ್ನಡ ಸಾಹಿತ್ಯ ಮತ್ತು ಶಿಲ್ಪಕಲೆಗೆ ನೀಡಿದ ಪ್ರೋತ್ಸಾಹ ಚಿತ್ರಗಳು ಹಾಗೂ ಪುಷ್ಪ ಮಾದರಿಗಳ ಮೂಲಕ ವಿವರಿಸಲಾಗುತ್ತದೆ. ಗಂಗರ ಕಾಲದಲ್ಲಿ ಆನೆಗಳ ತರಬೇತಿ, ರಾಜಧಾನಿಗಳ ವೈಶಿಷ್ಟ್ಯ, ದೇವಾಲಯಗಳ ನಿರ್ಮಾಣ ಶೈಲಿ, ಚಿತ್ರಕಲೆ, ಧಾರ್ಮಿಕ ಸಹಿಷ್ಣುತೆ ಮತ್ತು ಆಡಳಿತ ವ್ಯವಸ್ಥೆಯ ಕುರಿತ ಮಾಹಿತಿಯನ್ನೂ ಸಾರ್ವಜನಿಕರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಪ್ರದರ್ಶನದಲ್ಲಿ ಅಳವಡಿಸಲಾಗುತ್ತಿದೆ.



ಕರ್ನಾಟಕದ ಇತಿಹಾಸದಲ್ಲಿ ಗಂಗರು ಅತ್ಯಂತ ಸುದೀರ್ಘ ಅವಧಿಯ ಆಡಳಿತ ನಡೆಸಿದ ರಾಜವಂಶ. ಅವರು ಕಲೆ, ವಾಸ್ತುಶಿಲ್ಪ, ಶಿಕ್ಷಣ, ಕೃಷಿ, ನೀರಾವರಿ ಮತ್ತು ಕನ್ನಡ ಸಂಸ್ಕೃತಿಗೆ ನೀಡಿದ ಕೊಡುಗೆಗಳನ್ನು ಪ್ರತಿಯೊಬ್ಬ ಕನ್ನಡಿಗರೂ ತಿಳಿದುಕೊಳ್ಳಬೇಕು. ಈ ಉದ್ದೇಶದಿಂದ ಸುಮಾರು 2.45 ಕೋಟಿ ರು. ವೆಚ್ಚದಲ್ಲಿ ಅರ್ಥಪೂರ್ಣ ಹಾಗೂ ಐತಿಹಾಸಿಕ ಮಹತ್ವವುಳ್ಳ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ.

-ಡಾ.ಎಂ.ಜಗದೀಶ್, ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕ

ಸಾರ್ವಜನಿಕರ ನಿರೀಕ್ಷೆ

ಪ್ರತಿ ವರ್ಷದಂತೆ ಈ ಬಾರಿಯೂ ಲಕ್ಷಾಂತರ ಮಂದಿ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವ ನಿರೀಕ್ಷೆಯಿದ್ದು, ಪ್ರಕೃತಿ ಸೌಂದರ್ಯದೊಂದಿಗೆ ಕರ್ನಾಟಕದ ಇತಿಹಾಸವನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುವ ಈ ಪ್ರದರ್ಶನ ಪ್ರವಾಸಿಗರು, ವಿದ್ಯಾರ್ಥಿಗಳು ಹಾಗೂ ಇತಿಹಾಸಾಸಕ್ತರಿಗೆ ವಿಶೇಷ ಅನುಭವ ನೀಡಲಿದೆ. ಗಂಗರ ವೈಭವವನ್ನು ಪುಷ್ಪಗಳಲ್ಲಿ ಅರಳಿಸುವ ಈ ಪ್ರದರ್ಶನ, ಸ್ವಾತಂತ್ರ್ಯೋತ್ಸವದ ಸಂಭ್ರಮಕ್ಕೆ ಮತ್ತಷ್ಟು ಕಳೆ ತರಲಿದೆ.

Samyuktha Karnataka Pg.14

ಜೂ.1ರಿಂದ ಜು.22ರವರೆಗೆ 293.3 ಮಿಮೀ ಮಳೆ | ಈ ಅವಧಿಯ ವಾಡಿಕೆಗಿಂತ ಶೇ.18.87ರಷ್ಟು ಕೊರತೆ | ಆಹಾರ ಧಾನ್ಯ-ಎಣ್ಣೆಕಾಳು ಬಿತ್ತನೆ ಕುಂಠಿತ

7 ವಾರದಲ್ಲಿ ಶೇ.19 ಮಳೆ ಕೊರತೆ: ಕೃಷಿ ಬಿತ್ತನೆಗೆ ಹಿನ್ನಡೆ

ದೆಹಲಿ: ಭಾರತದ ಕೃಷಿ ಚಟುವಟಿಕೆ ಬಹು ಮುಖ್ಯವಾಗಿ ನೈಋತ್ಯ ಮುಂಗಾರು ಮಳೆ ಅವಧಿಯನ್ನೇ ಆಶ್ರಯಿಸಿದೆ. ಆದರೆ, ಈ ಬಾರಿ ಭಾರತದಲ್ಲಿ ನೈಋತ್ಯ ಮುಂಗಾರು ಹಂಗಾಮಿನ ಮಳೆ ಕಳೆದ 7 ವಾರಗಳಲ್ಲಿ ವಾಡಿಕೆಗಿಂತ ಬಹಳ ಕಡಿಮೆ ಸುರಿದಿದೆ. ಶೇ.18.87ರಷ್ಟು ಮಳೆ ಕೊರತೆಯಾಗಿದೆ. ಪರಿಣಾಮವಾಗಿ ದೇಶದ ಹಲವು ರಾಜ್ಯಗಳಲ್ಲಿ ಕೃಷಿ ಚಟುವಟಿಕೆಗೆ ಭಾರೀ ಹಿನ್ನಡೆಯಾಗಿದೆ.

ದೇಶದ ಕೃಷಿ ವ್ಯವಸ್ಥೆ ಮುಂಗಾರು ಮಳೆಯನ್ನೇ ಅವಲಂಬಿಸಿದೆ. ಸಮಯಕ್ಕೆ ಸರಿಯಾಗಿ ಮಳೆಯಾಗದಿರುವುದು ಖಾರೀಫ್ ಬೆಳೆಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಮಳೆ ಕೊರತೆಯಿಂದ ಹಲವು ರಾಜ್ಯಗಳಲ್ಲಿ ಬಿತ್ತನೆ ಕಾರ್ಯ ವಿಳಂಬವಾಗಿದೆ. ಮಳೆ ಕೊರತೆ ಹೀಗೇ ಮುಂದುವರಿದರೆ ಭತ್ತ-ರಾಗಿ-ಜೋಳ-ಗೋಧಿ ಮತ್ತಿತರ ಆಹಾರ ಧಾನ್ಯಗಳು, ಬೇಳೆಕಾಳು ಮತ್ತು ಎಣ್ಣೆಕಾಳುಗಳು, ಸೊಯಾಬೀನ್ ಮತ್ತು ಹತ್ತಿ ಸೇರಿ ಪ್ರಮುಖ ಖಾರೀಫ್ ಬೆಳೆಗಳ ಬೆಳವಣಿಗೆ ಮೇಲೆ ಪರಿಣಾಮ ಬೀಳಬಹುದು ಎಂದು ಕೃಷಿ ತಜ್ಞರು ಎಚ್ಚರಿಸಿದ್ದಾರೆ.

ದ್ವಿದಳ ಧಾನ್ಯ: ಮುಂಗಾರು ಮಳೆ ಕೊರತೆಯು ದೇಶದಲ್ಲಿನ ದ್ವಿದಳ ಧಾನ್ಯ ಬಿತ್ತನೆ ಚಟುವಟಿಕೆ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ದ್ವಿದಳ ಧಾನ್ಯಗಳ ಬಿತ್ತನೆ ಪ್ರಮಾಣ ಪ್ರಸ್ತುತ ಬಹಳ ಕಡಿಮೆಯಾಗಿದೆ. ಆದರಲ್ಲೂ ತೊಗರಿ ಮತ್ತು ಹೆಸರು ಕಾಳುಗಳ ಬಿತ್ತನೆ ಪ್ರಮಾಣ ಈ ಬಾರಿ ಬಹಳ ಕಡಿಮೆ ಇದೆ. ದೇಶದ ಕೆಲವೆಡೆ ಶೇ.15ರಷ್ಟು ಕಡಿಮೆಯಾಗಿದ್ದರೆ, ಕೆಲವೆಡೆ ಶೇ.23ರಷ್ಟು ಹಿನ್ನಡೆ ಅನುಭವಿಸಿದೆ.

ಎಣ್ಣೆಕಾಳು: ಮುಂಗಾರು ಮಳೆ ಶೇ.19ರಷ್ಟು ಕಡಿಮೆ ಆಗಿರುವುದರಿಂದ ದೇಶದಲ್ಲಿ ಈವರೆಗಿನ ಎಣ್ಣೆಕಾಳು ಬಿತ್ತನೆಯಂತೂ ಶೇ.39.32ರಷ್ಟು ಗರಿಷ್ಠ ಪ್ರಮಾಣದಲ್ಲಿ ಹಿಂದೆ ಬಿದ್ದಿದೆ. ದೇಶದ ಕೇಂದ್ರ ಭಾಗದಲ್ಲಿ ಮತ್ತು ಪಶ್ಚಿಮದ ರಾಜ್ಯಗಳಲ್ಲಿ(ಗುಜರಾತ್, ರಾಜಸ್ಥಾನ್, ಮಹಾರಾಷ್ಟ್ರ) ಸೋಯಾಬೀನ್ ಮತ್ತು ನೆಲಗಡಲೆ ಬಿತ್ತನೆ ಮೇಲೆ ಮಳೆ ಕೊರತೆ ತೀವ್ರ ಪರಿಣಾಮ ಬೀರಿದೆ.

ಏಕದಳ ಧಾನ್ಯ: ಏಕದಳ ಧಾನ್ಯಗಳ ಬಿತ್ತನೆಯಲ್ಲಿಯೂ ಭಾರೀ ಹಿನ್ನಡೆಯಾಗಿದೆ. ಮಳೆ ಇಲ್ಲದ ಕಾರಣ ರಾಗಿ, ಜೋಳ, ಗೋಧಿ ಮೊದಲಾದ ಧಾನ್ಯಗಳ ಭತ್ತನೆಗೆ (ಶೇ.16.35ರಷ್ಟು) ಹಿನ್ನಡೆಯಾಗಿದೆ. ಕರ್ನಾಟಕ, ಮಧ್ಯಪ್ರದೇಶದಲ್ಲಿ ಬರಗಾಲ ಆವತರಿಸಿದೆ. ರಾಗಿ, ಜೋಳ, ನವಣೆ ಮೊದಲಾದ ಆಹಾರ ಧಾನ್ಯಗಳ ಬಿತ್ತನೆಗೆ ಪೆಟ್ಟು ಬಿದ್ದಿದೆ. ತೆಲಂಗಾಣದಲ್ಲಿ ಮಳೆ ಪ್ರಮಾಣ ಕಡಿಮೆ ಇದೆ. ಮಹಾರಾಷ್ಟ್ರದಲ್ಲಿ ಕೆಲವೆಡೆಯಷ್ಟೇ ಮಳೆಯಾಗಿದ್ದರಿಂದ ರಾಜ್ಯದ ಉಳಿದ ಭಾಗಗಳಲ್ಲಿ ಕೃಷಿ ಕಾರ್ಯ ಮಂದಗತಿಯಲ್ಲಿದೆ.

ಜಲಾನಯನ ಪ್ರದೇಶಗಳಲ್ಲಿ ಸಕಾಲದಲ್ಲಿ ಮಳೆಯಾಗದೇ ಇರುವುದರಿಂದ ಆಣೆಕಟ್ಟೆಗಳಿಗೆ ನೀರಿನ ಹರಿವು ಕಡಿಮೆಯಾಗಿದೆ. ಪರಿಣಾಮ ಆಣೆಕಟ್ಟೆಗಳು ಈವರೆಗೂ ಭರ್ತಿಯಾಗಿಲ್ಲ.

ಆದ ಕಾರಣ ಭತ್ತ ನಾಟಿಗೆ ಹಿನ್ನಡೆಯಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಭತ್ತ ನಾಟಿಗೆ ಶೇ.13ರಷ್ಟು ಹಿನ್ನಡೆಯಾಗಿದೆ.

ವಾಣಿಜ್ಯ ಬೆಳೆ ಹತ್ತಿ ಬಿತ್ತನೆ ಚಟುವಟಿಕೆಯಲ್ಲಿಯೂ ದೇಶದ ಕೃಷಿ ವಲಯ ಈ ಬಾರಿ ಬಹಳ ಹಿಂದೆ ಬಿದ್ದಿದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.



ದೇಶದಲ್ಲಿ 52 ದಿನಗಳಲ್ಲಿ ಕೇವಲ 293 ಮಿಮೀ ಮಳೆ

ದೆಹಲಿ: ನೈಋತ್ಯ ಮುಂಗಾರು ಮಾರುತಗಳನ್ನು ಆಧರಿಸಿದ ಮುಂಗಾರು ಹಂಗಾಮಿನ ಮಳೆ ದೇಶದ ಕೃಷಿಕರಿಗೆ ಈ ಬಾರಿ ಕೈಕೊಟ್ಟಿದೆ. ಜೂ.1ರಿಂದ ಜು.22ರವರೆಗೆ ಅವಧಿಯಲ್ಲಿ ದೇಶದಲ್ಲಿ 361.5 ಮಿ.ಮೀ. ಮಳೆ ಬೀಳಬೇಕಿತ್ತು. ಆದರೆ, ಕೇವಲ 293.3 ಮಿ.ಮೀ. ಮಳೆಯಾಗಿದೆ. ವಾಡಿಕೆ ಮಳೆಗಿಂತ ಶೇ.18.87ರಷ್ಟು ಕಡಿಮೆ ಮಳೆ ಸುರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಅಂಕಿ-ಅಂಶ ಪ್ರಕಟಿಸಿದೆ.ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗೆ ಪೆಟ್ಟು ಬಿದ್ದಿದೆ. ಜಲಾಶಯಗಳು ನೀರಿನ ಸಂಗ್ರಹ ಕಡಿಮೆಯಾಗಿ ಬಣಗುಟ್ಟುತ್ತಿವೆ. ಕುಡಿಯುವ ನೀರಿನ ಲಭ್ಯತೆ ಕಡಿಮೆಯಾಗಿದೆ. ಮಧ್ಯ ಮತ್ತು ಪೂರ್ವ ಭಾರತದ ಕೆಲವೆಡೆ ಮಧ್ಯಂತರ ಭಾರಿ ಮಳೆಯಾಗಿದೆ. 16 ಉಪ ವಿಭಾಗಗಳಲ್ಲಷ್ಟೇ ಸಾಮಾನ್ಯ ಪ್ರಮಾಣದ ಮಳೆ ಸುರಿದಿದೆ. ಅರುಣಾಚಲ ಪ್ರದೇಶ, ಸೌರಾಷ್ಟ್ರ-ಕಚ್, ಪಂಜಾಬ್ ರಾಜ್ಯದಲ್ಲಿ ಮಳೆ ಕೊರತೆ ಹೆಚ್ಚಿದೆ. ಹಾಗಾಗಿ, ರಾಷ್ಟ್ರದ ಸರಾಸರಿ ಮಳೆ ದಾಖಲಾಗಿಲ್ಲ. ದೇಶಾದ್ಯಂತದ 20 ಹವಾಮಾನ ಉಪ ವಿಭಾಗಗಳಲ್ಲಿ ಮಳೆ ಕೊರತೆಯಾಗಿದೆ. ದೇಶದ ಒಟ್ಟಾರೆ ಮಳೆಯಲ್ಲಿ ಕೊರತೆಯಾಗಿದೆ. ಉತ್ತರ-ಪಶ್ಚಿಮ ಭಾರತ ಹಾಗೂ ದಕ್ಷಿಣ ಪರ್ಯಾಯ ದ್ವೀಪದ ಹಲವೆಡೆ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿದೆ.

ಐಎಂಡಿ ಆಶಾವಾದ: ಬಂಗಾಳ ಕೊಲ್ಲಿಯಲ್ಲಿ ಹೊಸ ಹವಾಮಾನ ವ್ಯವಸ್ಥೆ ರೂಪುಗೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಮಧ್ಯ, ಪೂರ್ವ ಹಾಗೂ ಉತ್ತರ ಭಾರತದ ಹಲವೆಡೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಆಶಾಭಾವ ವ್ಯಕ್ತಪಡಿಸಿದೆ.

ಕರ್ನಾಟಕ 22, ಉ.ಪ್ರ 45 ಜಿಲ್ಲೆಗಳಲ್ಲಿ ಮಳೆ ಕೊರತೆ

ಪ್ರಮುಖ ಕೃಷಿ ಪ್ರಧಾನ ರಾಜ್ಯಗಳಲ್ಲಿ ಮಳೆ ಕೊರತೆಯಾಗಿರುವುದರಿಂದ ದೇಶದ ಒಟ್ಟಾರೆ ಕೃಷಿ ಚಟುವಟಿಕೆಗೆ ದೊಡ್ಡ ಪೆಟ್ಟು ಬೀಳುವಂತಾಗಿದೆ. ಕರ್ನಾಟಕದಲ್ಲಿನ 31 ಜಿಲ್ಲೆಗಳ ಪೈಕಿ 22 ಜಿಲ್ಲೆಗಳಲ್ಲಿ ಭಾರೀ ಮಳೆ ಕೊರತೆಯಾಗಿದೆ. ಪರಿಣಾಮ ರಾಜ್ಯದ ಶೇ.71 ಪ್ರದೇಶ ಮುಂಗಾರು ಮಳೆಯಿಂದ ವಂಚಿತವಾಗಿದೆ. ಪರಿಣಾಮ ಕೃಷಿ ಚಟುವಟಿಕೆಗೆ ಭಾರೀ ಹಿನ್ನಡೆಯಾಗಿದೆ. ದೇಶದ ಅತ್ಯಂತ ದೊಡ್ಡ ರಾಜ್ಯ ಉತ್ತರ ಪ್ರದೇಶದಲ್ಲಿನ 75 ಜಿಲ್ಲೆಗಳ ಪೈಕಿ 45 ಜಿಲ್ಲೆಗಳಲ್ಲಿ, ಅಂದರೆ ಶೇ.60ರಷ್ಟು ಪ್ರದೇಶದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದರಿಂದ ಕೃಷಿಗೆ ಪೆಟ್ಟು ಬಿದ್ದಿದೆ. ಉಳಿದಂತೆ ಛತ್ತೀಸ್‌ಗಢದಲ್ಲಿನ 33 ಜಿಲ್ಲೆಗಳ ಪೈಕಿ 19ರಲ್ಲಿ(ಶೇ.58 ಪ್ರದೇಶ) ಮತ್ತು ಮಧ್ಯಪ್ರದೇಶದ 55 ಜಿಲ್ಲೆಗಳ ಪೈಕಿ 18ರಲ್ಲಿಯೂ(ಶೇ.33ರಷ್ಟು ಪ್ರದೇಶ) ಮಳೆ ಕೊರತೆ ಎದುರಿಸುತ್ತಿವೆ. ಪರಿಣಾಮ ಈ ಭಾಗದಲ್ಲಿ ಕೃಷಿ ಬಿತ್ತನೆ ಚಟುವಟಿಕೆಗೆ ಪೆಟ್ಟು ಬಿದ್ದಿದೆ.

ಎಲ್‌ನಿನೊ ಚಂಡಮಾರುತ ಋಣಾತ್ಮಕ ಪರಿಣಾಮ



ಫೆಸಿಫಿಕ್ ಸಾಗರದಲ್ಲಿ ಈ ಬಾರಿ ಸೃಷ್ಟಿಯಾಗಿರುವ 'ಎಲ್‌ನಿನೊ' ಚಂಡಮಾರುತ, ಕಡೆಗೂ ಭಾರತದಲ್ಲಿನ ಪ್ರಮುಖ ಮಳೆ ಅವಧಿಯ ಮೇಲೆ ತನ್ನ ಪರಿಣಾಮ ಬೀರಿದೆ. ನೈಋತ್ಯ ಮುಂಗಾರು ಹಂಗಾಮು ಭಾರತದ ದಕ್ಷಿಣ ತುದಿಗೆ ಬಂದು ಮುಟ್ಟುವುದನ್ನು ವಿಳಂಬಗೊಳಿಸಿದೆ. ಬಳಿಕ ತಡವಾಗಿ ಬಂದ ಮುಂಗಾರು ಮಾರುತಗಳನ್ನು ದಕ್ಷಿಣ ಭಾರತದ ಕರಾವಳಿ ಭಾಗದಲ್ಲಿ ಹೆಚ್ಚು ಕಾಲ ಇರಲು ಬಿಡದೇ ಉತ್ತರ ಭಾರತದತ್ತ ವೇಗವಾಗಿ ಸೆಳೆದೊಯ್ದಿದೆ. ಪರಿಣಾಮವಾಗಿ ದಕ್ಷಿಣ ಭಾರತದ ರಾಜ್ಯಗಳಾದ ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶದಲ್ಲಿ ಮುಂಗಾರು ಮಳೆ ವಾಡಿಕೆಗಿಂತಲೂ ಕಡಿಮೆ ಸುರಿದಿದೆ. ಬದಲಾಗಿ ಮಹಾರಾಷ್ಟ್ರ, ಜಮ್ಮು-ಕಾಶ್ಮೀರ, ಉತ್ತರಾಖಂಡ, ದೆಹಲಿ, ಅರುಣಾಚಲ ಪ್ರದೇಶ ಮೊದಲಾದೆಡೆ ಕೆಲವು ದಿನ ಮಳೆ ಅರ್ಭಟಿಸಿದೆ. ಮಹಾರಾಷ್ಟ್ರದಲ್ಲಂತೂ ವಾಡಿಕೆಗಿಂತ ಅದೆಷ್ಟೋ ಪಟ್ಟು ಅಧಿಕ ಮಳೆ ಸುರಿದಿದೆ. ಸಮುದ್ರ ತಟದ ನಗರ ಮುಂಬೈನಲ್ಲಂತೂ ಒಂದು ತಿಂಗಳ ಮಳೆ 3-4 ದಿನಗಳಲ್ಲೇ ಸುರಿದು ವಾಣಿಜ್ಯ ನಗರದಲ್ಲಿ ಜಲಪ್ರಳಯವನ್ನೇ ಸೃಷ್ಟಿಸಿತ್ತು. ಮಳೆ ಕೊರತೆ ದೇಶದಲ್ಲಿನ 741 ಜಿಲ್ಲೆಗಳ ಪೈಕಿ 410ರಲ್ಲಿ ಅಂದರೆ, ಶೇ.55ರಷ್ಟು ಜಿಲ್ಲೆಗಳಲ್ಲಿ ಜುಲೈ ಮಧ್ಯಂತರದವರೆಗೂ ವಾಡಿಕೆಗಿಂತ ಬಹಳ ಕಡಿಮೆ ಮಳೆಯಾಗಿದೆ. 74 ಜಿಲ್ಲೆಗಳಲ್ಲಿ(ಶೇ.10ರಲ್ಲಿ) ಮಳೆ ಪ್ರಮಾಣ ಭಾರಿ ಕಡಿಮೆ ಇದೆ. ಜಾರ್ಖಂಡ್ ರಾಜ್ಯದ ಶೇ.96 ಜಿಲ್ಲೆಗಳಲ್ಲಿ, ಬಿಹಾರದ ಶೇ.87 ಮತ್ತು ತೆಲಂಗಾಣದ ಶೇ.79 ಜಿಲ್ಲೆಗಳಲ್ಲಿ ಮಳೆ ಕೊರತೆ ತೀವ್ರವಾಗಿದೆ. ಉಳಿದಂತೆ ದೇಶದ 336 ಜಿಲ್ಲೆಗಳಲ್ಲಿ(ಶೇ.45 ಜಿಲ್ಲೆಗಳಲ್ಲಿ) ಮಳೆ ಕೊರತೆ ಕಡಿಮೆ ಮಟ್ಟದಲ್ಲಿದೆ. 223 ಜಿಲ್ಲೆಗಳಲ್ಲಿ(ಶೇ.30ರಲ್ಲಿ) ಸಾಧಾರಣ ಮಳೆಯಾಗಿದೆ. ಇನ್ನೊಂದೆಡೆ, ದೇಶದ 108 ಜಿಲ್ಲೆಗಳಲ್ಲಿ(ಶೇ.15ರಷ್ಟು ಜಿಲ್ಲೆ) ವಾಡಿಕೆಗಿಂತಲೂ ಅಧಿಕ ಮಳೆಯಾಗಿದೆ. 93 ಜಿಲ್ಲೆಗಳಲ್ಲಿ(ಶೇ.13ರಲ್ಲಿ) ಅತ್ಯಧಿಕ ಪ್ರಮಾಣದ ಮಳೆಯಾಗಿದ್ದರೆ, 15 ಜಿಲ್ಲೆಗಳಲ್ಲಿ(ಶೇ.2ರಲ್ಲಿ) ಕುಂಭದ್ರೋಣ ಎನಿಸುವಷ್ಟು ಪ್ರಮಾಣದಲ್ಲಿ ಮಳೆಯಾಗಿದ್ದು, ಭಾರೀ ಹಾನಿಯೂ ಸಂಭವಿಸಿದೆ. ಜೀವಹಾನಿಯೂ ಆಗಿದೆ.

Samyutha Karnataka Pg.15